

ಎಡದಿಂದ ಬಲಕ್ಕೆ:

1. ವಿದಾಯವನ್ನು ಹೇಳಿದ ನಂತರವಷ್ಟೇ ಹೊಸ ಹುಟ್ಟು 4
3. ಹೇಗಾಗಿದೆ ಕಂಡಿರಾ , ಒಣಗಿಹೋದ ಈ ಮರದ ತುಂಡು 3
4. ವರ್ಷಾಂತ್ಯದ ವರೆಗೂ ಸಹಕರಿಸಬೇಕೆಂದು ಒತ್ತಾಯ 3
6. ಮಹಡಿ ಏರುವಾಗ ಕಾಣಿಸಿದ್ದು 'ಈಶ್ವರನ ವಾದ್ಯ' 4
8. ಎಲ್ಲಕ್ಕೂ ಸಂಚಕಾರ ತರುವ ಬುದ್ಧಿ ತುಂಬ ಅಲ್ಪ ಮಟ್ಟದ್ದು 4
10. ಮತದಾರರನ್ನು ಮಾತನಾಡಿಸುವಾಗಲೂ ಏಕಿಂಥ ಭೇದ? 4
12. ಪಿಸುಮಾತಿನಲ್ಲಿ ತಿಳಿಸಿದ್ದ ರಹಸ್ಯವನ್ನು ಜ್ಞಾಪಿಸು 4
16. ನ್ಯಾಯವನ್ನರಿಯಲಿಲ್ಲವೇನು ಅವರ ಕಣ್ಣು? 3
17. ರೂಪವನ್ನು ಅಂದಗೊಳಿಸುವಂತಹ ದುರಸ್ತಿ ಉಂಟೇ? 3
18. ವಾರಿಧಿಯ ಸ್ವಾಸ್ಥ್ಯ ಕೆಡಿಸುವುದನ್ನು ಪ್ರತಿಭಟಿಸು 4

ಮೇಲಿಂದ ಕೆಳಕ್ಕೆ:

1. ಕೇಡಿನ ಸುದ್ದಿಯನ್ನು ಕೇಳಿಯೇ ಗಡಗಡ 3
2. ಎಂಥ ವಿನಯಶೀಲನಾಗಿದ್ದಾನೆ ನೋಡಿ, ಈ ಅನ್ಯದೇಶೀಯ 3
3. ಕಣ್ಣೀರು ಹರಿಸಿದರೆ ಮೂಡುವುದೇನು ಚಿಗುರು? 3
5. ಕುಳಿತು ಕುಳಿತು ಕಾಲ ಕಳೆಯುವುದಕ್ಕೂ ಅನಾರೋಗ್ಯಕ್ಕೂ ಗಾಢ ಹೆಣಿಗೆ, ನಂಟು 3
6. ಕಡೆಯ ತನಕವೂ ಆತ ದರೋಡೆಕೋರನಾಗಿಯೇ ಉಳಿದನಲ್ಲ! 4
7. ಆ ಮಂಗ ಈ ಮಂಗ ಎಸೆದಾಡಿದ ವಸ್ತುವಿನಿಂದ ಎಂಥ ಪರಿಮಳ! 4
8. ಸಂಬಳವನ್ನೇ ನೀಡಿಲ್ಲ, ಇನ್ನೆಲ್ಲಿಯ ಗೌರವಧನ 4
9. ತ್ರಾಸ ತಪ್ಪಿಸಲು ಸಹಾಯ ಧನವನ್ನು ಬೇಗ ಮುಟ್ಟಿಸು 4
11. ತಪ್ಪಿನ ಅರಿವಾದಾಗಿನಿಂದ ಭಾರೀ ಪರಿತಾಪ, ದುಃಖ 3
13. ಗಮನವಿರಿಸಿ ನೋಡಿ, ಇದೇನು ಬೃಹತ್ ಚರ್ಮ ವಾದ್ಯ? 3
14. ಪಶುಗಳಿಗೆ ಮೇವಿನ ಪೂರೈಕೆಗಾಗಿ ಕೋರಿಕೆ 3
15. ಸುಂದರ ದಿರಿಸಿನ ಜೊತೆಗೆ ಆಭರಣವನ್ನೂ ತೊಡು 3

---

### 23-04-2020 ಉತ್ತರಗಳು

ಎಡದಿಂದ ಬಲಕ್ಕೆ:

1. ವಿಪರ್ಯಾಸ 3. ಅನೇಕ 4. ರೋಚಕ 6. ಶತಮಾನ 7. ರಸಾಯನ 9. ಗತಕಾಲ 12. ಗಡಿಬಿಡಿ 14. ಕುರುಬ 15. ಯಾತನೆ 16. ಗೇಣಿಕಾರ

ಮೇಲಿಂದ ಕೆಳಕ್ಕೆ:

1. ವಿಕಸನ 2. ಸರೋವರ 3. ಅಮಿತ 5. ಕಲಾಯ 6. ಶರವೇಗ 8. ನಡೆನುಡಿ 10. ತಡಕು 11. ಲಗುಬಗೆ 12. ಗಡಿಯಾರ 13. ಬಿತ್ತನೆ

ಪ್ರಶ್ನಾ ಂಕಣ

# ಸ್ವರ್ಗದ ಪಕ್ಷಿ: ಏಕೆ ಈ ಹೆಸರು?

ಸ್ವರ್ಗದ ಪಕ್ಷಿ ಅಥವಾ ಸಗ್ಗವಕ್ಕಿ (Paradise Bird) ಇದು ಕಾಗೆಗಳ ವರ್ಗಕ್ಕೆ ಸೇರಿದ ಆದರೆ ತುಂಬ ವಿಶಿಷ್ಟವಾದ ಖಗ ವಿಧ. ಸಗ್ಗವಕ್ಕಿಗಳಲ್ಲಿ 15 ವಂಶಗಳಿಗೆ ಸೇರಿದ ಒಟ್ಟು 42 ಪ್ರಭೇದಗಳಿವೆ. ಇಡೀ ಜಗದಲ್ಲಿ ಈ ಎಲ್ಲ ಪ್ರಭೇದಗಳೂ ಆಸ್ಟ್ರೇಲಿಯಾದ ಈಶಾನ್ಯದಂಚಿನ ಮತ್ತು ಅದರ ಸನಿಹದ 'ಪಪುವಾನ್ಯೂಗಿನಿ' ದ್ವೀಪದ ವೃಷ್ಟಿವನಗಳಲ್ಲಿ ಮಾತ್ರ ನೆಲೆಗೊಂಡಿವೆ. ಹೀಗೆ ತುಂಬ ಸೀಮಿತ ಪ್ರದೇಶದಲ್ಲಷ್ಟೇ ವಾಸ್ತವ್ಯ ಹೊಂದಿರುವ ಈ ಹಕ್ಕಿಗಳ ಎಲ್ಲ ಪ್ರಭೇದಗಳ ವಯಸ್ಕ ಗಂಡು ಹಕ್ಕಿಗಳು ಮಾತ್ರ ಪ್ರತಿ ವರ್ಷ ಸಂತಾನೋತ್ಪತ್ತಿಯ ಕಾಲದಲ್ಲಿ ಹೆಣ್ಣುಗಳನ್ನು ಆಕರ್ಷಿಸಲು ವರ್ಣಮಯ ಗರಿಗಳ ಸುರಸುಂದರ 'ಪ್ರಣಯದುಡುಗೆ'ಗಳನ್ನು ಧರಿಸುತ್ತವೆ (ಚಿತ್ರ1); ಹೆಣ್ಣಿನ ಮುಂದೆ ಅದನ್ನು ಪ್ರದರ್ಶಿಸುತ್ತವೆ (ಚಿತ್ರ 2). ಪ್ರಣಯ ಕಾಲ ಮುಗಿದೊಡನೆ ಆ ವಿಶೇಷ ಗರಿಗಳೆಲ್ಲ ಉದುರಿಹೋಗುತ್ತವೆ. ಹಾಗೆ ಅಲಂಕರಣಗೊಂಡಿರುವ ಕಾಲದಲ್ಲಿ ಈ ಹಕ್ಕಿಗಳ ಸೌಂದರ್ಯ, ವರ್ಣ ವೈವಿಧ್ಯ ಮತ್ತು ಶೃಂಗಾರ ವೈಭವಗಳು ವರ್ಣನಾತೀತ!

ವಿಸ್ಮಯ ಏನೆಂದರೆ, ಈ ಹಕ್ಕಿಗಳ ಪರಿಚಯ 16ನೇ ಶತಮಾನದವರೆಗೂ ಹೊರ ಜಗತ್ತಿಗೆ ತಿಳಿದಿರಲೇ ಇಲ್ಲ! ಆ ಕಾಲದ ಸುಮಾರಿಗೆ ಈ ಹಕ್ಕಿಗಳ ನೆಲೆಯಾದ 'ಮಲಯನ್ ದ್ವೀಪಸ್ತೋಮ'ಕ್ಕೆ ವಾಣಿಜ್ಯಕ್ಕಾಗಿ ಯೂರೋಪಿಯನ್ ವರ್ತಕರು ಮತ್ತು ಅನ್ವೇಷಕರು ಬರತೊಡಗಿದ್ದರು. ಆಗ ಅಲ್ಲಿನ ಸ್ಥಳೀಯ ಜನ ಈ ಸುಂದರ ಹಕ್ಕಿಗಳನ್ನು ಸೆರೆಹಿಡಿದು ತಂದು (ಚಿತ್ರ3) ಅವನ್ನು ಕೊಂದು, ಅವುಗಳ ಕಾಲುಗಳನ್ನೂ ರೆಕ್ಕೆಗಳನ್ನೂ ಕತ್ತರಿಸಿ, ಅಲಂಕಾರಿಕ ಗರಿಸಹಿತ ಶರೀರವನ್ನು ಸಂಸ್ಕರಿಸಿ ಭಾರೀ ಲಾಭಕ್ಕೆ




ಮಾರಲು ಆರಂಭಿಸಿದರು. ಆ ಹಕ್ಕಿಗಳು ನೆಲಕ್ಕೇ ಇಳಿಯದೆ ಜೀವನಪೂರ್ತಿ ಅಂತರಿಕ್ಷದಲ್ಲೇ ತೇಲಾಡುವ, ಸ್ವರ್ಗದ ಸನಿಹದಲ್ಲೇ ಬದುಕುವ, 'ದೇವರ ಹಕ್ಕಿಗಳು' ಎಂದೇ ವಿವರಿಸುತ್ತಿದ್ದರು. ಬಹು ಕಾಲ ಯೂರೋಪಿಯನ್ನರು ಮತ್ತು ಇತರ ಹೊರ ಜಗತ್ತಿನ ಜನ ಕೂಡ ಆ ವಿವರಣೆಯನ್ನೇ ನಂಬಿದ್ದರು. ಈ ಹಕ್ಕಿಗಳಿಗೆ 'ಸ್ವರ್ಗದ ಹಕ್ಕಿ'ಗಳೆಂದೇ ಹೆಸರಿಟ್ಟರು ಕೂಡ. ಆ ಅಭಿದಾನವೇ ಈಗಲೂ ಹಾಗೆಯೇ ಉಳಿದಿದೆ.

ಈ ಹಕ್ಕಿಗಳ ವಾಸ್ತವತೆಯನ್ನು ವಿಖ್ಯಾತ ಬ್ರಿಟಿಷ್ ನಿಸರ್ಗಶಾಸ್ತ್ರಜ್ಞ 'ಆಲ್ಫ್ರೆಡ್ ರಸೆಲ್ ವ್ಯಾಲೇಸ್' ಪತ್ತೆಹಚ್ಚಿದ. ಇಸವಿ 1854–1862 ರ ಅವಧಿಯಲ್ಲಿ ಆ ವಿಜ್ಞಾನಿ ಈ ಹಕ್ಕಿಗಳ ನೈಸರ್ಗಿಕ ನೆಲೆಗೇ ಹೋಗಿ ಅವುಗಳ ಪ್ರತ್ಯಕ್ಷ ಅಧ್ಯಯನವನ್ನು ನಡೆಸಿದ; ಸ್ವರ್ಗದ ಹಕ್ಕಿಗಳ ಬಗೆಗೆ ಪ್ರಚಲಿತಗೊಂಡಿದ್ದ ಮಿಥ್ಯೆಗಳನ್ನು ಅಳಿಸಿಹಾಕಿದ.

ಅದೇನೇ ಇದ್ದರೂ ಪ್ರಣಯಕಾಲದಲ್ಲಿ ಗಂಡು ಸಗ್ಗವಕ್ಕಿಗಳು 'ಸ್ವರ್ಗೀಯ ಸೌಂದರ್ಯ'ವನ್ನು ಪ್ರದರ್ಶಿಸುವುದಂತೂ ಸತ್ಯ.

■ ಎನ್. ವಾಸುದೇವ್